ಓ.ಎಸ್.ನಂ.460-2006, ಡಿಡಬ್ಲ್ಯೂ.1

**ಇಂದು ದಿನಾಂಕ 21-02-2024 ರಂದು ಡಿಡಬ್ಲ್ಯೂ-1 ರವರನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಎಸ್.ವಿ.ಕೆ ರವರಿಂದಃ**

**18.** ನಾನು ಈಗ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ಹೊರುತಪಡಿಸಿ ಇತರೆ ಬೇರೆ ದಾಖಲೆಗಳು ನನ್ನ ಬಳಿ ನನ್ನ ಸ್ವತ್ತಿಗೆ ಸಂಬಂಧಿಸಿದಂತೆ ಇರುವುದಿಲ್ಲ. ನಿಡಿ-1 ರಲ್ಲಿ ಅಂಚಿನ ಮನೆ ವಿಸ್ತೀರ್ಣ ಪೂರ್ವ ಪಶ್ಚಿಮ 28 ಅಡಿ, ಉತ್ತರ ದಕ್ಷಿಣ 32 ಅಡಿ ಎಂದು ನಮೂದಿಸಿರುವುದು ಸರಿಯಿರುತ್ತದೆ. ನಾನು ಪೂರ್ವ ಪಶ್ಚಿಮ 24 ಅಡಿ, ಉತ್ತರ ದಕ್ಷಿಣ 12 ಅಡಿ ಯಲ್ಲಿ ಕಟ್ಟಿರುವ ಮನೆ ಶೀಟ್ ಮನೆ ಆಗಿರುತ್ತದೆ. ನಾನು ಸದರಿ ಮನೆ ಕಟ್ಟಲು ಯಾವುದೇ ಅನುದಾನ ಪಡೆದಿರುವುದಿಲ್ಲ.

19. ನಾನು ಅಕ್ರಮವಾಗಿ ಕಟ್ಟಿರುವ ದಾವಾ ಬಿ ಸ್ವತ್ತಿನಲ್ಲಿ ಯಾರು ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ವೈ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಯಾವುದೇ ನನ್ನ ಖಾಲಿ ಜಾಗ ಇಲ್ಲ ಎಂದರೆ ಸರಿಯಲ್ಲ. ದಾವಾ ವೈ ಸ್ವತ್ತಿನ ಪಶ್ಚಿಮಕ್ಕೆ ನನಗೆ ಸೇರಿದ ಯಾವುದೇ ಸ್ವತ್ತು ಅಥವಾ ಖಾಲಿ ಜಾಗ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎಕ್ಸ್ ಸ್ವತ್ತಿನ ದಕ್ಷಿಣಕ್ಕೆ ಇರುವ ರಸ್ತೆಯನ್ನು ಸರ್ಕಾರದಿಂದ ಅಗಲಿಕರಣ ಮಾಡಲಾಗಿದೆ ಎಂದರೆ ಸುಳ್ಳು. ದಾವಾ ಅನುಸೂಚಿ ಎಕ್ಸ್ ಮತ್ತು ವೈ ನಲ್ಲಿ ನಮೂದಿಸಿರುವ ಹಳೇ ಖಾತಾ ನಂಬರ್ 51 ಮತ್ತು 52 ಗಳಿಗೆ 58/58, 91/91, ಎಂದು ಹೊಸ

ಖಾತೆ ನಂಬರ್ ಗಳನ್ನು ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

20. ಕೋಳಿಹಟ್ಟಿ ಆಂಜಿನಪ್ಪ ನವರ ಮಕ್ಕಳ ನಡುವೆ ವಿಭಾಗ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಕೋಳಿಹಟ್ಟಿ ಆಂಜಿನಪ್ಪ ರವರ ಮಕ್ಕಳ ನಡುವೆ ಭಾಗ ಆದ ನಂತರ ದಾವಾ ಸ್ವತ್ತುಗಳು ವಾದಿಯ ಭಾಗಕ್ಕೆ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. 1912 ಮತ್ತು 1918 ನೇ ಸಾಲಿನಲ್ಲಿ ವಾದಿಯ ಕುಟುಂಬದವರು ದಾವಾ ಎ ಮತ್ತು ಎಎ ಸ್ವತ್ತಗಳನ್ನು ಖರೀದಿಸಿದ್ದು, ಸದರಿ ಸ್ವತ್ತುಗಳು ದಾವಾ ಎಕ್ಸ್ ನಲ್ಲಿ ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಎಕ್ಸ್ ಸ್ವತ್ತಿನಲ್ಲಿ ನಾನು ಪೂರ್ವ ಪಶ್ಚಿಮ 18 ಅಡಿ ಉತ್ತರ ದಕ್ಷಿಣ 12 ಅಡಿ ಜಾಗವನ್ನು ಅಂದರೆ ದಾವಾ ಅನುಸೂಚಿ ಬಿ ಸ್ವತ್ತನ್ನು ಅಕ್ರಮವಾಗಿ ಒತ್ತುವರಿ ಮಾಡಿ ಮನೆ ನಿರ್ಮಿಸಿರುತ್ತೇನೆ ಎಂದರೆ ಸುಳ್ಳು. ನ್ಯಾಯಾಲಯದಿಂದ ಒಬ್ಬರು ವಕೀಲರನ್ನು ಆಯುಕ್ತಕರಾಗಿ ನೇಮಕ ಮಾಡಿ ದಾವಾ ಸ್ವತ್ತುಗಳನ್ನು ಅಳತೆ ಮಾಡಿಸಲು ನನ್ನ ತಕರಾರು ಇರುವುದಿಲ್ಲ.

21. ನಾನು ದಾವಾ ಬಿ ಸ್ವತ್ತಿನಲ್ಲಿ ಅಕ್ರಮವಾಗಿ ಮನೆ ನಿರ್ಮಿಸುತ್ತಿದ್ದಾಗ 2ನೇ ವಾದಿ ಪಂಚಾಯ್ತಿಗೆ ನಿಪಿ-19 ರಂತೆ ಮನೆ ಕಟ್ಟಬಾರದು ಎಂದು ತಕರಾರು ಮಾಡಿದ್ದರು ಎಂದರೆ ಸುಳ್ಳು. ವಾದಿ ತಕರಾರು ಮಾಡಿದಾಗ ಮನೆ ಕಟ್ಟುವುದನ್ನು ನಿಲ್ಲಿಸಿ, ನಂತರ 2006 ರಲ್ಲಿ ದಾವಾ ಬಿ ಸ್ವತ್ತಿನಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸುಳ್ಳು. 2006 ವಾದಿಗಳು ನಾನು ಕಟ್ಟುತ್ತಿದ್ದ ಮನೆಯನ್ನು ಕಟ್ಟದಂತೆ ಮತ್ತು ಸದರಿ ಜಾಗವನ್ನು ಬಿಟ್ಟುಕೊಡುವಂತೆ ಕೇಳಿಕೊಂಡಿದ್ದರು ಎಂದರೆ ಸುಳ್ಳು.

22. ದಿ.20-04-2006 ಮತ್ತು 30-04-2006 ರಲ್ಲಿ ವಾದಿಗಳು ಮತ್ತು ನನ್ನ ನಡುವೆ ದಾವಾ ಬಿ ಸ್ವತ್ತಿಗೆ ಸಂಬಂಧಿಸಿದಂತೆ ಜಗಳ ಆಗಿ ಈ ಸಂಬಂಧ ದೂರು ದಾಖಲಾಗಿದೆ ಎಂದರೆ ಸುಳ್ಳು. ನಾನು ಆಗ ಪೋಲೀಸ್ ಠಾಣೆಯಲ್ಲಿ ದಾವಾ ಬಿ ಸ್ವತ್ತನ್ನು ಬಿಟ್ಟು ಕೊಡುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸುಳ್ಳು. ಆ ನಂತರ ನಾನು ದಾವಾ ಬಿ ಅನುಸೂಚಿ ಸ್ವತ್ತಿನಲ್ಲಿ ವಾದಿಗಳಿಗೆ ಹೆದರಿಸಿ ಮನೆಯನ್ನು ಕಟ್ಟಿಕೊಂಡಿರುತ್ತೇನೆ ಎಂದರೆ ಸುಳ್ಳು. ದಾವಾ ಬಿ ಅನುಸೂಚಿ ಸ್ವತ್ತು ವಾದಿಗಳಿಗೆ ಸೇರಿದ್ದು, ನನಗೆ ಅಲ್ಲಿ ಯಾವುದೇ ಸ್ವತ್ತು ಇಲ್ಲದೇ ಇದ್ದರೂ, ವಾದಿಗಳಿಗೆ ಸೇರಿದ ಸ್ವತ್ತನ್ನು ಲಪಾಟಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಾನು ರಾಜಕೀಯವಾಗಿ ಬಲಾಡ್ಯನಾಗಿರುವ ಕಾರಣ ವಾದಿಗಳಿಗೆ ಹೆದರಿಸಿ ದಾವಾ ಬಿ ಅನುಸೂಚಿ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡಿರುತ್ತೇನೆ ಎಂದರೆ ಸುಳ್ಳು. ದಾವಾ ಬಿ ಅನುಸೂಚಿ ಸ್ವತಿತನಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.

ಓ.ಎಸ್.ನಂ.420/2010,

ಪಿಡಬ್ಲ್ಯೂ.1

**ಇಂದು ದಿನಾಂಕ 07-07-2023 ರಂದು ಪಿಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

1 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಲಾಗಿ, ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

ಪಿಡಬ್ಲ್ಯೂ.1

**ಇಂದು ದಿನಾಂಕ 05-07-2023 ರಂದು ಪಿಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

1 ನೇ ಪ್ರತಿವಾದಿ ರವರು ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು 2 ನೇ ಪ್ರತಿವಾದಿ ಏಕಪಕ್ಷಿಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**